ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 140.

ವ್ಯತಪಟ್ಟ ಕುರುಬರ ಬಂಡಾರಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ನರಸುಹ್ಮ ಮೈಸರ್, ಗಾರ್ಡಿಯ್ಯ ಇವನ ತಾತ ಹುಚ್ಚೇಗವ್ವಡರು, ವ್ಯತಪಟ್ಟ ಸದರೀ ಬಂಡಾರಿಗೆ ಮಗ ಚಿಕ್ಕವ್ವ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ತಾಲ್ಲೂಕು ಕಡಬೂರು ಸ್ಥಳದ ಸದರೀ ಹುಚ್ಚೇಗವ್ವಡರು ಸದರೀ ವಾಸಸ್ಥರಾಗಿ ವ್ಯತಪಟ್ಟ ಬಂಡಾರಿಯ ಜೆಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟಿ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹುಚ್ಚೇಗವ್ವಡರ ಅರ್ಜಿಯನ್ನು 1889ನೇ ಇಸವಿ ಜುಲೈ ತಿಂಗಳು ತಾರೀಖು 19ರಲ್ಲು ಕೇಳಿ ಸರ ಟಿಫಿಕೇಟಿ ಪಡೆಯತಕ್ಕ ಬಾಧ್ಯತೆಯನ್ನೆ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ಬಂಡಾರಿಯ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 143.

ಅರ್ಜೀದಾರ ರಂಗಮ್ಮನವರು, ಮೈನರಾದ ಮೈಸೂರು ವೇವರಾಜಮೊಹಲ್ಲಾ ಚೆಲುವಾಂಬಾ ಅಗ್ರಹಾರ ಸ್ಥಳದ ಶ್ರೀನಿವಾಸರಾಫ ವಾಖಾನ್ರ ಮಗ ಶ್ರೀನಿವಾಸಅಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಶ್ರೀನಿವಾಸಯ್ಯಂಗಾರ್ರಿಗೆ ಅಜ್ಜೀ ಆಗಬೇಕೆಂಬ ಪಕ್ಕನವೇಲೆ ಸದರೀ ಚೆಲುವಾಂಬಾ ಅಗ್ರಹಾರ ಸ್ಥಳದ ರಂಗ ಮ್ಮನವರು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀಕೊಟ್ಟು ಇರುತ್ತಾನೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1889ನೇ ಇಸವಿ ಆಗಸ್ಟ್ ತಾರೀಖು 14ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿ ಸ್ ಕೊಡಲಾಗಿದೆ.

1889ನೇ ಇಸವಿ ಅರ್ಜೀ ನಂಬರ್ 151.

ವ್ಯತಪಟ್ಟ ನರಸೀಪುರದ ನಾಗಪ್ಪಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಶ್ರೀನಿವಾಸಯ್ಯನವರು, ವ್ಯತಪಟ್ಟ ಸದರೀ ನಾಗಪ್ಪಯ್ಯನವರಿಗೆ ಅಂಣ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮ ಕೂಡ್ಲು ನರಸೀಪುರದ ಸ್ಥಳದ ಸದರೀ ಶ್ರೀನಿವಾಸಯ್ಯನವರು ಸದರೀವಾಸಸ್ಥರಾಗಿ ವ್ಯತಪಟ್ಟ ನಾಗಪ್ಪಯ್ಯನವರ ಜೆಂದಗಿ ಬಗ್ಯಾಗಿ ಬ ರತಕ್ಕ 70 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟಿ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸಯ್ಯನವರ ಅರ್ಜಿಯನ್ನು 1889ನೇ ಇಸವಿ ಆಗಸ್ಟ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟಿ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ನಾಗಪ್ಪಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1889ನೇ ಇಸವಿ ಜುಲೈ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ಭಸ್ತಖತ್ತೊಡನೆ ಕೊಡೋಸಾಗಿದೆ.

ಎಸ್. ಜೇಮಾಪೆರಾವ್, ಡಿಸ್ಟ್ರಿಕ್ಟ ಜಡ್ಜ್.

ಮೈಸೂರು ಸಬೆ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ನಜರ್‌ಬಾದಿನಲ್ಲಿ ಇರುವ ಗೋವಿಂದರಾಜ ವೊದಲ್ಯಾರ್ರ ವಿಷಯದಲ್ಲಿ—

ಸ್ರ 1888ನೇ ಇಸವಿ ದಿವಾಳೀ ಕೇಸ್ ನಂಬರ್ 288.

ಹುಕುಂ.

ವೇಲ್ಕಂಡ ಗೋವಿಂದರಾಜ ವೊದಲ್ಯಾರನು ನಿರ್ಬಂಧದಿಂದ ಮಿಲಾಸೆಯಾಗಬೇಕೆಂದು ಕೊಟ್ಟಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರವಾದ ಗೋವಿಂದರಾಜ ವೊದಲ್ಯಾರ್ರ ಪರವಾಗಿ 1ನೇ ಗ್ರೇಡ್ ಪ್ಲೀಡರ್ ಮೆ॥ ಸದಾಶಿವರಾಯರನ್ನು ಮತ್ತು ಸದರೀಯ ವನ ಲೇಣೇದಾರ್ರಾದ 1ನೇ ಸೋಮಸುಂದರ ವೊದಲ್ಯಾರ್ ಕಡೆ 1ನೇ ಗ್ರೇಡ್ ಪ್ಲೀಡರ್ ಮೆ॥ ವೆಂಕಟರಾಮಯ್ಯನವರಿಗೂ ದರ್ಯಾಫ್ತೀ ಮಾ ಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರುತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ:—2ನೇ ಪುಂಡೀ ಕೃಷ್ಣಮೊಚಾರ್ ಕಡೆ ಮೈ॥ ಗೋವಿಂದರಾಯರು, 3ನೇ ವರ್ಧಮಾನ ಪಂಡಿತ, 4ನೇ ಜರ್ಮನ್‌ಸೊರ್ಡ ಬ್ಯಾಂಕ್, 5ನೇ ರಾಮಚಂದ್ರಬ್ಯಾಂಕ್, 6ನೇ ಕೃಷ್ಣಬಾಯಿ, 7ನೇ ಸರ್ವಹನವರ್ದನಿಬ್ಯಾಂಕು.